# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 205 |
| 2. | ಸದಸ್ಯರ ಹೆಸರು | : ಶ್ರೀ ಅ. ದೇವೇಗೌಡ, |
| 3. | ಉತ್ತರಿಸಬೇಕಾದ ದಿನಾಂಕ | : 17.02.2022 |
| 4. | ಉತ್ತರಿಸುವ ಸಚಿವರು | : ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | 1984 ರಲ್ಲಿ ಮಂಜೂರಾಗಿರುವ ರಾಮನಗರ ಜಿಲ್ಲೆ, ಮಾಗಡಿ ತಾ: ಮಾಡಬಾಳು ಹೋಬಳಿ, ವೈ ಜಿ ಗುಡ್ಡ ಡ್ಯಾಂನ ಕಾಮಗಾರಿಯು 1996 ರಲ್ಲಿ ಮುಕ್ತಾಯವಾಗುವ ಹಂತ ತಲುಪಿದ ಸಮಯದಲ್ಲಿ ಭಾರಿ ಮಳೆಯಿಂದಾಗಿ ಡ್ಯಾಂ ತುಂಬಿದ್ದು, ಡ್ಯಾಂನ ಗೇಟ್ ಸರಿಯಾಗಿ ಅಳವಡಿಸದೆ ಶೇಖರಣೆಯಾದ ನೀರು ಕೃಷಿ ಚಟುವಟಿಕೆಗೆ ಉಪಯೋಗವಾಗದೆ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಮನಗರ ಜಿಲ್ಲೆ, ಮಾಗಡಿ ತಾ: ಮಾಡಬಾಳು ಹೋಬಳಿ, ವೈ ಜಿ ಗುಡ್ಡ ಹೊಸಕೆರೆ ಕಾಮಗಾರಿಯನ್ನು 1988-89ರಲ್ಲಿ ಕೈಗೆತ್ತಿಕೊಂಡಿದ್ದು, 1997-98ನೇ ಸಾಲಿನಲ್ಲಿ ಕೆರೆಯ ಏರಿ ಕೋಡಿ, ತೂಬುಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ಕೆರೆಯ ಶೇಖರಣಾ ಸಾಮರ್ಥ್ಯವು 2.79 MCM ಇರುತ್ತದೆ. ಕೆರೆಯ ಏರಿಯ ಉದ್ದವು 450ಮೀಟರ್ ಇರುತ್ತದೆ ಹಾಗೂ ಸದರಿ ಕೆರೆಗೆ 2 ತೂಬುಗಳನ್ನು ಅಳವಡಿಸಲಾಗಿರುತ್ತದೆ. ಕೆರೆಯ ತೂಬಿಗೆ ಅಳವಡಿಸಲಾದ ಎಂ.ಎಸ್.ಗೇಟುಗಳು 25 ವರ್ಷ ಹಳೆಯದಾಗಿದ್ದು ಶಿಥಿಲಗೊಂಡಿದ್ದು ನೀರಿನ ಸೋರಿಕೆಯಾಗುತ್ತಿರುತ್ತದೆ. ಸದರಿ ಕೆರೆಯು 1998-99ನೇ ಸಾಲಿನಿಂದ ಈವರೆಗೆ ಪೂರ್ಣ ಪ್ರಮಾಣದಲ್ಲಿ ತುಂಬಿರುವುದಿಲ್ಲ. ಆದರೆ, ಕೆರೆಯಲ್ಲಿ ಶೇಖರಣೆಯಾಗಿರುವ ನೀರನ್ನು ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಉಪಯೋಗಿಸಲಾಗುತ್ತಿರುತ್ತದೆ.<br><br>ಸದರಿ ಕೆರೆಯ ತೂಬಿನ ಗೇಟುಗಳನ್ನು ಬದಲಾಯಿಸಲು ರೂ.128.00 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. |
| ಆ | ಈ ಡ್ಯಾಂನ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿದ ಅನುದಾನ ಎಷ್ಟು? ಕಾಮಗಾರಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಹಾಗೂ ಖರ್ಚಾಗಿರುವ ಅನುದಾನ ಎಷ್ಟು? (ಪೂರ್ಣ ಮಾಹಿತಿ ನೀಡುವುದು) | ವೈ.ಜಿ ಗುಡ್ಡ ಹೊಸಕೆರೆ ನಿರ್ಮಾಣ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.2713.62. ಲಕ್ಷಗಳು. ಸದರಿ ಕಾಮಗಾರಿಗೆ ರೂ.2617.39ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ಸಂಪೂರ್ಣವಾಗಿ ವೆಚ್ಚ ಮಾಡಲಾಗಿರುತ್ತದೆ. |
| ಇ | ಈ ಡ್ಯಾಂನ ಕಾಮಗಾರಿ ಯಾವಾಗ ಮುಕ್ತಾಯಗೊಳ್ಳುವುದು? | ಈ ಯೋಜನೆಯನ್ನು 1998-99 ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ವೈ.ಜಿ.ಗುಡ್ಡ ಕೆರೆ ತೂಬು ಗೇಟುಗಳನ್ನು ಸುಮಾರು 25 ವರ್ಷಗಳ ಹಿಂದೆ ಅಳವಡಿಸಲಾಗಿದ್ದು, ಸದರಿ ಕೆರೆಯ ನೀರನ್ನು ಬಹುಗ್ರಾಮ ಕುಡಿಯುವ ನೀರು ಯೋಜನಗೆ ಉಪಯೋಗಿಸುತ್ತಿರುವುದರಿಂದ ತೂಬು ಗೇಟುಗಳನ್ನು ಬಳಸದೇ ಇದ್ದುದರಿಂದ ಗೇಟುಗಳು ಶಿಥಿಲಗೊಂಡಿರುತ್ತದೆ. ಸದರಿ ಕೆರೆಗೆ ಗೇಟು ಅಳವಡಿಸುವ ಕಾಮಗಾರಿಗೆ ನಿಯಮಾನುಸಾರ ಟೆಂಡರು ಕರೆದು ದುರಸ್ತಿಪಡಿಸಲು ಕ್ರಮ ವಹಿಸಲಾಗುವುದು. |

ಕಡತ ಸಂಖ್ಯೆ:MID 11 LCQ 2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.